

ರಾಷ್ಟ್ರೀಯ ಹೆದ್ದಾರಿ 367ರಲ್ಲಿರುವ ದೊಡ್ಡ ಸೇತುವೆ

ಲೋಕಾಪುರದ ದೇಶಪಾಂಡೆ, ಜಮಖಂಡಿ ಅಪ್ಪಾಲಾಲ ಅಂತೋರು ಈ ಕಲೆನ ಬ್ಹಾಳ ಬೆಳಿಸ್ಯಾರ.

ಇನ್ನ ಇಲಕಲ್ಲ ಸೀರಿ ಅಂದ್ರ ಯಾ ಹೆಣ್ಮಕ್ಕಳಿಗೆ ಕಣ್ಣ ಅಗಲ ಆಗೂದಿಲ್ಲಾ ಹೇಳ್ರಿ...? ಅದರ ಜೊತಿಗಿ ಗುಳೇದಗುಡ್ಡ ಕಣ ಇದ್ರಂತೂ ಮುಗಿದ ಹೋತು ನೋಡ್ರಿ, ಸ್ವರ್ಗನ ಕೈಯಾಗ ಸಿಕ್ಕಾಂಗ ಅಕ್ಕೈತಿ. ಅವನ ಉಟ್ಕೊಂಡ ತಲಿಮ್ಯಾಲಿ ಬುತ್ತಿ ಇಟಗೊಂಡ ತ್ವಾಟದಾಗಿನ ರಸ್ತಾ ಹಿಡಿದ ಬಂದದ್ದ್ ನೋಡಿದ್ರ ಒಕ್ಕಲಗ್ಯಾಗ ಬಿಸಿಲಾಗ ಗಳೇ ಹೊಡದದ್ದ ನೆಂಪ ಹಾರತೈತಿ. ಅದಕ ಸುಮ್ಮನ ಹಾಡ್ಯಾರೇನ್ರಿ...? 'ಇಲಕಲ್ಲ ಸೀರಿ ಉಟ್ಕೊಂಡ ಮೊಣಕಾಲ್ಗಂಟ ಎತ್ಕೊಂಡು ಏರಿ ಮೇಲೆ ಏರಿ ಬಂದ್ರೂ ನಾರಿ, ಬುಟ್ಟಿಯಲ್ಲಿ ರೊಟ್ಟಿ ತಂದ್ಳು ಪೋರಿ, ಮಲ್ಲಿಗಿ ಹೂ ಮಲ್ಲಿಗಿ ಆಹಾ... ಮೈಸೂರ ಮಲ್ಲಿಗಿ' ಅಂತ.

ಅದರ ಜೊತಿಗಿ ಇಲಕಲ್ಲ ಗ್ರಾನೈಟ್‌ಗೆ ಇಡೀ ರಾಜ್ಯದಾಗ ಅಷ್ಟ ಅಲ್ಲ ದೇಶದಾಗನೂ ದೊಡ್ಡ ಹೆಸರ ಐತಿ. ಬ್ಯಾರೆ ಬ್ಯಾರೆ ಬಣ್ಣದ್ದು, ಹಂಗ ಬ್ಯಾರೆ ಬ್ಯಾರೆ ಗುಣಮಟ್ಟದ ಎಷ್ಟೊಂದ ತರ ಗ್ರಾನೈಟ್ ಕಲ್ಲಗಳು ಸಿಗ್ತಾವ. ಅದರಿಂದ ಎಷ್ಟ ಮನಿಗೋಳು ತಮ್ಮ ಸೌಂದರ್ಯನ ಹೆಚ್ಚಿಸಿಕೊಂಡಾವ ಅನ್ನೂದು ಲೆಕ್ಕ ಇಲ್ಲ.

ಜೀವನದಾಗ ಒಮ್ಮೆರ ಅಮೀನಗಡದ ಕರದಂಟ ತಿನ್ನಬೇಕ ನೋಡ್ರಿ. ಬಾಯಾಗಿಟ್ಟರ ತನ್ನ ತಾನ ಕರಗತೈತಿ. ಅಷ್ಟ ಮೆತ್ತಗ, ಅಷ್ಟ ರುಚಿ ಇರತೈತಿ ಕರದಂಟ. ಗುಳೇದಗುಡ್ಡದಾಗ ರಬಡ್ಯಾಗ ಜೀಲೆಬಿ ತಿಂದ ಅದರ ಮ್ಯಾಲೆ ಭಜಿ ತಿಂದಬಿಟ್ರ ಅದರ ಮುಂದ ಸ್ವರ್ಗ ಜಕ್ಕಿಸಿದ್ರ ಸೈ. ಅದನ ತಿಂದ ಸಮೀಪದಾಗಿನ ಬಾದಾಮಿಗೆ ಹೋದ್ರ ಚಾಲುಕ್ಯರ ಕಟ್ಟಿಸಿದ ಮೇಣ ಬಸಿದಿ, ಅಗಸ್ತ್ಯತೀರ್ಥ, ಹುಚ್ಚಮಲ್ಲಿ ಗುಡಿ ನೋಡಬೌದು. ಜೊತಿಗಿ ಕನ್ನಡಾಗಿನ ಮೊದಲ ತ್ರಿಪದಿ ಕಪ್ಪೆ ಅರೆಭಟ್ಟನ ಶಾಸನ ನೋಡಬೌದು. ಒಮ್ಮಿ ಆ ಶಾಸನ ಓದಿದ್ರ ಕನ್ನಡ ಜನರ ಗುಣ ವಿಶೇಷ ತಿಳ್ಕೋಬೌದು. ಹಂಗ ಮಹಾಕೂಟ, ಯುನೆಸ್ಕೋ ವಿಶ್ವ ಪಾರಂಪರಿಕ ಸ್ಥಳವಾದ ಪಟ್ಟದಕಲ್ಲು, ಐಹೊಳೆಯ ದೇವಸ್ಥಾನಗೊಳು, ಶಿಲ್ಪಗಳ ಸೌಂದರ್ಯ ನೋಡಾಕ ಎರಡ ಕಣ್ಣ ಸಾಲೂದಿಲ್ಲ.

ಬನಶಂಕರಿ ಜಾತ್ರಿಯಂತೂ ತಿಂಗಳ ಮೇಲ್ಪಟ್ಟ ನಡಿತೈತಿ. ಬಹುಶಃ ಇಲ್ಲಿ ಹಾಕೂ ನಾಟಕ ಥೇಟರಗಳು ಬ್ಯಾರೆ ಯಾವುದ ಜಾತ್ರ್ಯಾಗೂ ಹಾಕಾಕಿಲ್ಲ ಅಷ್ಟ ಇರ್ತಾವು. ರಾಜ್ಯದಾಗ ಇರೋ ಎಲ್ಲ ವೃತ್ತಿ ರಂಗಭೂಮಿ ಕಂಪನಿಗೊಳ ಮಿನ್ನ ಮಿನ್ನ ನಾಟಕಗೊಳು ಇಲ್ಲಿ ಇರ್ತಾವ. ಹಂಗ ಕಲಾವಿದರಿಗೆ ತಮ್ಮ ಕಲಾ ಪ್ರದರ್ಶನ ಮಾಡಾಕ ಜೊತಿಗೆ ಜೀವನಕೂ ಆಸರ ಆಗ್ತಾವು. ಜಾತ್ರಿ ವ್ಯಾಳೆದಾಗ ನೋಡಬೇಕ ಸ್ಥಳೀಕರು ಮತ್ತ ಸುತ್ತಮುತ್ತ ಹಳ್ಳಿಯಿಂದ ಬರೂ ಹೆಣ್ಣಮಕ್ಕಳ ಜ್ವಾಳದ ರೊಟ್ಟಿ, ಸಜ್ಜಿ ರೊಟ್ಟಿ ಅದ್ರಾಗ ತರ ತರದ ಪಲ್ಲೆ, ಅಗಸಿ, ಗುರೆಳ್ಳ, ಸೇಂಗಾ ಚಟ್ನಿ, ಕೆನಿ ಮಸರ ಅಗದಿ ಕಮ್ಮಿ ರೇಟಿನ್ಯಾಗ ಕೊಡ್ತಾರ. ಜಾತ್ರಿ ನೋಡಾಕ ಹೋದ ಬ್ಹಾಳಷ್ಟ ಮಂದಿ ಅಲ್ಲೆ ತಿನ್ನೋದು. ಹಂಗ ಆ ಅಕ್ಕತಂಗ್ಯಾರ ಕಕ್ಕುಲಾತಿಗೆ ಎರಡ ರೊಟ್ಟಿ ತಿನ್ನುವಾವ ಮೂರ ರೊಟ್ಟಿ ತಿನ್ನಬೇಕ ಹಂಗ ಮನಿ ಹೆಣ್ಮಕ್ಕಳಂಗ ಪ್ರೀತಿಲಿ ಊಟ ಬಡಿಸ್ತಾರ.

ಹನ್ನೆರಡನೇ ಶತಮಾನದಾಗ ವಚನಗಳ ಮೂಲಕ ಸಾಮಾಜಿಕ ಕ್ರಾಂತಿ ಮಾಡಿದ ಅಣ್ಣ ಬಸವಣ್ಣರ ಐಕ್ಯವಾದ ಕೂಡಲ ಸಂಗಮಕ ಹೋಗಿ ಬಂದ್ರ ಸಂಗಮೇಶನ ದರ್ಶನ ಆಗತೈತಿ. ಹಂಗ ನಮ್ಮ ಕನ್ನಡ ಸಾಹಿತ್ಯದಾಗ ವಚನದ ಮಹತ್ವ ಎಷ್ಟ ಅನ್ನೂದು ಗೊತ್ತಾಗತೈತಿ.

ನಮ್ಮೂರಿನ ಇನ್ನೊಂದ ವಿಶೇಷ ಅಂದ್ರ ಮೂರು ನದಿಗಳ ಹರಿಯೋವಂತ ಊರ ಅದ ಇದು. ಯಾಕಂದ್ರ ಉತ್ತರ ಗಡಿಭಾಗದಾಗ ಹಿರಿಹೊಳಿ ಅನಸಕೊಂಡ ಕೃಷ್ಣೆ ಹರದ್ರ, ದಕ್ಷಿಣ ಗಡಿಯಾಗ ಮಲಪ್ರಭೆ ಹರಿತಾಳ. ಇನ್ನ ಜಿಲ್ಲಾದ ನಡಬಾರಕ



ಮುಚಖಂಡಿ ಗ್ರಾಮದ ವೀರಭದ್ರೇಶ್ವರ ದೇವಸ್ಥಾನ